# ಗುರುದೇವ



ಇಂದು ರವಿತಾರೆ ಹಿಮಗಿರಿ ಗಂಗೆ ಗೋದಾ ಸಿಂಧು ಶುಭ ಜಲ ನಿಧಿಗಳೆಲ್ಲವು
ಚಂದದಲಿ ಮೆರೆವನ್ನೆಗಂ ಬಂದ "ಶ್ರೀ ಗುರುದೇವ" ಪೊರೆಯಲಿ ಶಿಷ್ಯ ಬಳಗವನು

ಧಾರ್ಮಿಕ ಮಾಸಿಕ ಪತ್ರಿಕೆ

ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರ ಶ್ರೀ ವೀರನಿರ್ವಾಣ ಶಕವರ್ಷ 2551/ಶ್ರೀ ವಿಶ್ವಾವಸು ನಾಮ ಸಂವತ್ಸರ

ಪುಟ : ೪ ಸಂಪುಟ : ೭೧ ಸಂಚಿಕೆ : ೦೯

15-09-2025 ಭಾದ್ರಪದ ಮಾಸ : ಕೃಷ್ಣ ಪಕ್ಷ ಸೋಮವಾರ

RNI No. 13248/57-POSTEL REGD No. KA/SK/SMG 198/2024-26

ಪರಮ ಸಂರಕ್ಷಕರು, ಸ್ವಾಮಿತ್ವ, ಪ್ರಧಾನ ಸಂಪಾದಕರು : ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು, ಶ್ರೀಕ್ಷೇತ್ರ ಹೊಂಬುಜ


ಶ್ರೀ ಕ್ಷೇತ್ರ ಹೊಂಬುಜ



ಭಗವಾನ್ ಶ್ರೀ ಪಾರ್ಶ್ವನಾಥ ಸ್ವಾಮಿ





ಜಗನ್ಮಾತೆ ಶ್ರೀ ಪದ್ಮಾವತಿ ದೇವಿ

ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ

## ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು

**ಶುಭಾಶೀರ್ವಚನ** ಶ್ರೀ ಕ್ಷೇತ್ರ ಹೊಂಬುಜ

## ಸಮಾಜ ಬಾಂಧವರ ಗಮನಕ್ಕೆ

ಧರ್ಮಬಂಧುಗಳೇ,

ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗಗಳ ಆಯೋಗವು ಸೆ. 22 ರಿಂದ ಅ. 7ರವರೆಗೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಹಮ್ಮಿಕೊಂಡಿದ್ದು, ಕೇಂದ್ರ ಸರ್ಕಾರವೂ ಸಹ ಜಾತಿ/ಜನಗಣತಿ ಸಮೀಕ್ಷೆಯನ್ನು ಮುಂದಿನ ವರ್ಷ (2026)ಕ್ಕೆ ನಡೆಸಲಿದೆ.

ಈ ಸಂದರ್ಭದಲ್ಲಿ ಜೈನ ಸಮುದಾಯದವರೆಲ್ಲರೂ

'ಧರ್ಮ' ಕಾಲಂನಲ್ಲಿ 'ಜೈನ' ಎಂದು

'ಜಾತಿ' ಕಾಲಂನಲ್ಲಿ 'ಜೈನ' ಎಂದೂ

ಉಪಜಾತಿ ಕಾಲಂನಲ್ಲಿ 'ಜೈನ ದಿಗಂಬರ' ಎಂದು

ಹಾಗೂ ಜೈನ (ಅವರವರ ಉಪಜಾತಿಗಳನ್ನು) 'ಜೈನ' ಪದದೊಂದಿಗೆ ಸೇರಿಸಿ ನಮೂದಿಸಬೇಕೆಂದು ತಮ್ಮಲ್ಲಿ ಅಪೇಕ್ಷಿಸುತ್ತೇವೆ. ಇದರಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ದೊರೆಯುವ ಎಲ್ಲ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗಲಿದೆ. ಸಾಮಾಜಿಕ ಭದ್ರತೆಯ ಬಗ್ಗೆ ಸಮೀಕ್ಷೆ ಅನುಕೂಲವಾಗಲಿದೆ.

ಜನಗಣತಿ ಫಾರ್ಮ್‌ಗೆ ಸಹಿ ಹಾಕುವ ಮೊದಲು ನೀವು ಕೊಟ್ಟ ಮಾಹಿತಿಯನ್ನೇ ಗುರುತಿಸಿದ್ದಾರೆಯೇ ಎಂದು ದೃಢಪಡಿಸಿಕೊಂಡು ಸಹಿ ಹಾಕುವಂತೆ ಜನರಲ್ಲಿ ಜಾಗೃತಿ ಮೂಡಿಸಿ, ಕರ್ನಾಟಕದ ಎಲ್ಲಾ ಸ್ಥಳೀಯ ಜೈನ ಸಮಾಜಗಳು, ವಿವಿಧ ಸಂಘ-ಸಂಸ್ಥೆಗಳು ಜಾಗೃತಿ ಮೂಡಿಸುವಲ್ಲಿ ಸಹಕರಿಸಬೇಕು.

॥ ವರ್ಧತಾಂಜಿನಶಾಸನಂ ॥

ಆಶೀರ್ವಾದಗಳೊಂದಿಗೆ,

ದಿನಾಂಕ : 12-09-2025

ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ
ಮಹಾಸ್ವಾಮೀಜಿಗಳವರು
ಅತಿಶಯ ಶ್ರೀಕ್ಷೇತ್ರ ಹೊಂಬುಜ.

ದಶಲಕ್ಷಣ ಮಹಾಪರ್ವ ಉತ್ತಮ ಧರ್ಮಗಳ ಪರ್ಯೂಷಣ

## "ಉತ್ತಮ ಕ್ಷಮಾಭಾವ ಕರ್ಮಕ್ಷಯ, ಸಮ್ಯಕ್ತ್ವ ಭಾವ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಆ. 28):** 'ಜೀವನದಲ್ಲಿ ಕರ್ಮಕ್ಷಯ ಮಾಡಲು ಧಾರ್ಮಿಕ ಭಕ್ತಿಭಾವ ಹೊಂದಿರಬೇಕು. ಕ್ರೋಧ', ಲೋಭ', ರಾಗಾದಿ ದ್ವೇಷಗಳನ್ನು ತ್ಯಜಿಸಿ ಕ್ಷಮಾಭಾವವುಳ್ಳವರಾಗಬೇಕು' ಎಂದು ಹೊಂಬುಜ ಜೈನ ಮಠದ ಪೀಠಾಧೀಶರಾಗಿರುವ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರು ಭಾದ್ರಪದ ಶುಕ್ಲಪಕ್ಷದ ಪಂಚಮಿಯಂದು ಪರ್ಯೂಷಣ ಪರ್ವದ ಆರಂಭದಂದು ಪ್ರವಚನದಲ್ಲಿ ತಿಳಿಸಿದರು.

WWW.HOMBUJAPADMAVATI.ORG

ಕ್ಷಮಾ ಧರ್ಮದ ವಿಚಾರದಲ್ಲಿ ಪೂಜ್ಯ ಶ್ರೀಗಳವರು **'ಸಮತಾಭಾವದಿಂದ ಕ್ಲೇಶರಹಿತ ಜೀವನ ನಿರ್ವಹಣೆಯನ್ನು ಕಾಯಾ-ವಾಚಾ-ಮನಸಾ ರೂಢಿಸಿಕೊಂಡರೆ ಸಮ್ಯಕ್ತ್ವಭಾವ ಹೊಂದಲು ಸಾಧ್ಯವಿದೆ'** ಎಂದು ಜೈನ ಧರ್ಮದ ಮೂಲ ಸಿದ್ಧಾಂತಗಳ ಅವಲೋಕನ ಮಾಡಿ ಉತ್ತಮ ದಶಧರ್ಮಗಳ ಚಿಂತನೆ ಮಾಡಲು ತಿಳಿಸಿದರು.

ಶ್ರೀ ಮಹಾವೀರ ಸ್ವಾಮಿ ಆರಾಧನೆ ಮಾಡಿದ ಭಕ್ತರು, ಶ್ರೀ ಪದ್ಮಾವತಿ ಮಹಿಳಾ ಸಂಘದ ಸದಸ್ಯರು, ಶ್ರೀ ಕುಂದಕುಂದ ಗುರುಕುಲ ವಿದ್ಯಾಪೀಠದ ವಿದ್ಯಾರ್ಥಿಗಳು ದಶಲಕ್ಷಣ ಪರ್ವದಲ್ಲಿ ಪಾಲ್ಗೊಂಡರು. ಶ್ರೀ 1008 ಪಾರ್ಶ್ವನಾಥ ಸ್ವಾಮಿ, ಯಕ್ಷಿ ಶ್ರೀ ಪದ್ಮಾವತಿ ದೇವಿ, ಶ್ರೀ ನೇಮಿನಾಥ ಸ್ವಾಮಿ, ಶ್ರೀ ಕೂಷ್ಮಾಂಡಿನಿ ದೇವಿ, ಶ್ರೀ ಸರಸ್ವತಿ ದೇವಿ, ಶ್ರೀ ಕ್ಷೇತ್ರಪಾಲ ಸನ್ನಿಧಿಯಲ್ಲಿ ವಿಶೇಷ ಪೂಜಾ ವಿಧಿ-ವಿಧಾನಗಳು ನೆರವೇರಿತು.

**ಹತ್ತು ದಿನಗಳ ಪರ್ಯಂತ ನಿಯಮಾನುಸಾರ ಉಪವಾಸ, ಪೂಜೆ, ಸ್ವಾಧ್ಯಾಯ, ಸಂಕಲ್ಪ ಮಾಡಲಾಯಿತು. ಶ್ರೀಗಳವರು ನಿತ್ಯವೂ ಆಯಾ ಧರ್ಮದ ಕುರಿತು ಪ್ರವಚನ ಮಾಡಿದರು.**

ಜೈನಾಚಾರದ ಅನುಷ್ಠಾನಗಳ ಪ್ರತಿಪಾದಕ

## 'ಚಾರಿತ್ರ್ಯ ಚಕ್ರವರ್ತಿ ಆಚಾರ್ಯ ಶ್ರೀ ಶಾಂತಿಸಾಗರ ಮುನಿಶ್ರೀ'

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ




**ಹೊಂಬುಜ (ಆ. 25):** 'ಜೈನ ಧರ್ಮದ ಮೂಲ, ಸಿದ್ಧಾಂತಗಳ ಅನುಷ್ಠಾನಗಳ ಪ್ರತಿಪಾದಕರಾಗಿ ಚಾರಿತ್ರ್ಯ ಚಕ್ರವರ್ತಿ ಆಚಾರ್ಯ ಶ್ರೀ ಶಾಂತಿಸಾಗರ ಮುನಿಶ್ರೀಯವರಾಗಿದ್ದರು. ಧರ್ಮ ಪ್ರಸಾರದ ಅಗ್ರಪಂಕ್ತಿಯಲ್ಲಿನ ದಿಗಂಬರ ಮುನಿಚರ್ಯೆಯ ಐಹಿತ್ಯದ ಕುರಿತ ಅವರ ಪ್ರತಿಪಾದನೆಯು ಅನುಕರಣೀಯವಾದುದು' ಎಂದು ಹೊಂಬುಜ ಜೈನ ಮಠದ ಪೀಠಾಧೀಶರಾಗಿರುವ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿಯವರು ಶ್ರೀಕ್ಷೇತ್ರದಲ್ಲಿ ಆ. 25ರ

2ನೇ ಪುಟಕ್ಕೆ

ಪರ್ಯೂಷಣ ಪರ್ವ : ಉತ್ತಮ ಬ್ರಹ್ಮಚರ್ಯ ಧರ್ಮ

## "ಅನಂತಗುಣ ಪ್ರಾಪ್ತಿಗಾಗಿ ಬ್ರಹ್ಮಚರ್ಯ ನಿಯಮ ಪಾಲನೆ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಸೆ.06):** ದಶಲಕ್ಷಣ ಪರ್ವದ ಹತ್ತನೇಯ ದಿನದಂದು **"ಉತ್ತಮ ಬ್ರಹ್ಮಚರ್ಯ ವ್ರತಾಚರಣೆ ಮತ್ತು ನಿಯಮಗಳ ಪಾಲನೆಯಿಂದ ಪ್ರತಿಯೋರ್ವರಿಗೂ ಅನಂತಗುಣ ಪ್ರಾಪ್ರಿಯಾಗುತ್ತದೆ"** ಎಂದು ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು ಪರ್ಯೂಷಣ ಪರ್ವದ **'ಉತ್ತಮ ಬ್ರಹ್ಮಚರ್ಯ'** ಧರ್ಮದ ಸಾರವನ್ನು ಪ್ರವಚನದಲ್ಲಿ ತಿಳಿಸಿದ ಅವರು **"ಇಂದ್ರಿಯ ನಿಗ್ರಹ ಮತ್ತು ಶಾರೀರಿಕ-ಮಾನಸಿಕ ಆರೋಗ್ಯ ಸಂರಕ್ಷಣೆಗಾಗಿ ಬ್ರಹ್ಮಚರ್ಯವ್ರತ ಪಾಲನೆಯು ನಿರ್ವಿಕಾರಭಾವದ ಪ್ರಸನ್ನತೆಯನ್ನು, ಚೈತನ್ಯವನ್ನು ನೀಡುತ್ತದೆ"** ಎಂದು ಅನಂತನೋಂಪಿಯನ್ನು ಆಚರಿಸುವ ಜೈನಾಚಾರವು ಸಂಕಷ್ಟಗಳಿಂದ ಪಾರು ಮಾಡುವುದು ಎಂದು ಹೇಳಿದರು.

ಪ್ರತಿದಿನ ಸಂಜೆ ಶ್ರೀ ಕುಂದಕುಂದ ವಿದ್ಯಾಪೀಠದ ವಿದ್ಯಾರ್ಥಿಗಳಿಗೆ ಜೈನ ಧರ್ಮದ ಬಗ್ಗೆ ವಿಶೇಷ ರಸಪ್ರಶ್ನೆ ಕಾರ್ಯಕ್ರಮವನ್ನು ಹಮ್ಮಿಕೊಂಡು ವಿಜೇತವಾದ ತಂಡಕ್ಕೆ ಬಹುಮಾನವನ್ನು ನೀಡಲಾಯಿತು. ಶ್ರೀ ಪದ್ಮರಾಜ ಇಂದ್ರ, ಅನಿಲ್ ಪಂಡಿತ್ ಭರತ್ ಇಂದ್ರ ಹಾಗೂ ಸಹಪುರೋಹಿತರು ಪೂಜಾ ಕೈಂಕರ್ಯದಲ್ಲಿ ಪಾಲ್ಗೊಂಡರು.

ಶ್ರೀಕ್ಷೇತ್ರ ಹೊಂಬುಜದಲ್ಲಿ ಶ್ರಾವಣ ಶುಕ್ರವಾರ ಸಂಪನ್ನ

## "ಭಕ್ತಿಯಿಂದ ಧರ್ಮಾಚರಣೆ ಶ್ರೇಷ್ಠವಾದುದು"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಆ. 23) :** **"ಭಕ್ತಿಯಿಂದ ದೇವ-ಗುರು-ಶಾಸ್ತ್ರ ಪೂಜೆಯಿಂದ ವಿಕೃತ ಭಾವಗಳು ಕ್ಷಯಿಸುತ್ತವೆ. ಭಕ್ತಿಯಿಂದ ಧರ್ಮಾಚರಣೆಯು ಸುಕೃತ ಫಲ ನೀಡುವುದು ಮತ್ತು ಶ್ರೇಷ್ಠವಾದುದು"** ಎಂದು ಹೊಂಬುಜ ಜೈನ ಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರು ಪ್ರವಚನದಲ್ಲಿ ತಿಳಿಸಿದರು.

ವಿಶ್ವಾವಸು ಸಂವತ್ಸರದ ಶ್ರಾವಣ ಮಾಸದ ಪಂಚಮ ಸಂಪತ್ ಶುಭ ಶುಕ್ರವಾರದಂದು ಅತಿಶಯ ಶ್ರೀಕ್ಷೇತ್ರ ಹೊಂಬುಜದ ಶ್ರೀ 1008 ಪಾರ್ಶ್ವನಾಥ ಸ್ವಾಮಿ ಮತ್ತು ಅಭೀಷ್ಟವರ ಪ್ರದಾಯಿನಿ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ಶೋಡಷೋಪಚಾರ ಪೂಜೆ ಮತ್ತು ವಿಶೇಷ ಪುಷ್ಪ-ಫಲ-ಶರ್ಕರ-ನೈವೇದ್ಯ-ಧಾನ್ಯಗಳನ್ನು ಭಕ್ತರು ಅರ್ಪಿಸಿದರು.

ಶ್ರೀ ನೇಮಿನಾಥ ಸ್ವಾಮಿ, ಶ್ರೀ ಮಹಾವೀರ ಸ್ವಾಮಿ, ಶ್ರೀ ಅದಿನಾಥ ಸ್ವಾಮಿ ಶ್ರೀ ಸರಸ್ವತಿ ದೇವಿ ಹಾಗೂ ಕೂಷ್ಮಾಂಡಿನಿ ದೇವಿ, ಶ್ರೀ ಕ್ಷೇತ್ರಪಾಲ ಸ್ವಾಮಿ ಸನ್ನಿಧಿಯಲ್ಲಿ ಭಕ್ತರು ಸ್ತೋತ್ರಗಳನ್ನು ಸ್ತುತಿಸಿ ಪೂಜೆ ಸಲ್ಲಿಸಿದರು. ಸ್ವಸ್ತಿಶ್ರೀಗಳವರು ಭಕ್ತರಿಗೆ ಶ್ರೀಫಲ ಮಂತ್ರಾಕ್ಷತೆ ನೀಡಿ ಹರಸಿದರು. ಊರ ಪರವೂರ ಭಕ್ತರು ಧನ್ಯರಾದರು. ಶ್ರೀಮಠದ ವತಿಯಿಂದ ಉಪಾಹಾರ, ಅನ್ನಪ್ರಸಾದ ವ್ಯವಸ್ಥೆ ವಸತಿ ಸೌಲಭ್ಯ ಅಚ್ಚುಕಟ್ಟಾಗಿ ಒದಗಿಸಲಾಗಿತ್ತು.

## 'ಚಾರಿತ್ರ್ಯ ಚಕ್ರವರ್ತಿ ಆಚಾರ್ಯ ಶ್ರೀ ಶಾಂತಿಸಾಗರ ಮುನಿಶ್ರೀ'

1ನೇ ಪುಟದಿಂದ

ಸೋಮವಾರದಂದು ಆಚಾರ್ಯ ಮುನಿಶ್ರೀ ಶಾಂತಿಸಾಗರ ಮಹಾರಾಜರ ಪದಾರೋಹಣದ ಶತಮಾನೋತ್ಸವ ಸಂಸ್ಮರಣ ಕಾರ್ಯಕ್ರಮದಲ್ಲಿ ತಿಳಿಸಿದರು. **'ಜೈನಾಚಾರವು ವಿಶ್ವದ ಸರ್ವ ಸಂಕಷ್ಟಗಳಿಗೆ ಪರಿಹಾರ ನೀಡುವ ಸೂತ್ರವನ್ನು ಪ್ರತಿಪಾದಿಸುತ್ತದೆ'** ಎಂದು ಶ್ರೀಗಳವರು ವಿವರಿಸಿ, ಸ್ಮರಿಸಿ, ವಿನಯಾಂಜಲಿ ಅರ್ಪಿಸಿದರು.

ಆಚಾರ್ಯ ಮುನಿಶ್ರೀ ಶಾಂತಿಸಾಗರ ಮಹಾರಾಜರ ಭಾವಚಿತ್ರಕ್ಕೆ ಶ್ರೀಗಳವರು, ಭಕ್ತರು, ಶ್ರೀ ಕುಂದಕುಂದ ವಿದ್ಯಾಪೀಠದ ವಿದ್ಯಾರ್ಥಿಗಳು ಪುಷ್ಪಾರ್ಚನೆ ಮಾಡಿದರು.

ರಕ್ಖಗೋ ಸಗ-ದೇಸಸ್ಸ, ರಟ್ಠಭತ್ತೋ ಣಿರಾಲಸೋ ।
ಣಿಬ್ಭೀಓ ವಿಕ್ಕಮ್ಮೀ ಧೀರೋ, ವಿವೇಗೀ ಸೇಣಿಗೋ ಗುಣೀ ॥ 23 ॥

ಅರ್ಥ: ನಮ್ಮ ದೇಶದ ರಕ್ಷಕ, ರಾಷ್ಟ್ರಭಕ್ತ, ಆಲಸ್ಯವಿಲ್ಲದ, ಭಯವಿಲ್ಲದ, ಶೌರ್ಯವಂತ ಧೀರ, ವಿವೇಕವಂತನೇ ಗುಣವಂತ ಸೈನಿಕ ಇದ್ದಾನೆ.

ಜಿನ-ದನಿ

## ಬರಲಿರುವ ಪರ್ವದಿನಗಳು

ವಿಶ್ವಾವಸುನಾಮ ಸಂವತ್ಸರದ

ಭಾದ್ರಪದಮಾಸ ಕೃಷ್ಣಪಕ್ಷ ದ್ವಾದಶಿಯಿಂದ ಆಶ್ವೀಜಮಾಸ ಕೃಷ್ಣಪಕ್ಷ ದಶಮಿಯವರೆಗೆ

**ಭಾದ್ರಪದ ಮಾಸ**

ಸೆ. 18 ಗುರು-ದ್ವಾದಶಿ-ಪುಷ್ಯ.
ಸೆ. 19 ಶುಕ್ರ-ತ್ರಯೋದಶಿ-ಆಶ್ಲೇಷ
ಸೆ. 20 ಶನಿ-ಚತುರ್ದಶಿ-ಮಘಾ
**ಸೆ. 21 ಭಾನು-ಅಮವಾಸ್ಯೆ-ಪೂರ್ವಾ, ಮಹಾಲಯ ಅಮವಾಸ್ಯೆ.**

**ಆಶ್ವೀಜ ಮಾಸ**

**ಸೆ. 22 ಸೋಮ-ಪ್ರತಿಪದ-ಉತ್ತರ, ಹೊಂಬುಜದಲ್ಲಿ ನವರಾತ್ರಿ ಪ್ರಾರಂಭ, ಘಟಸ್ಥಾಪನೆ.**
ಸೆ. 23 ಮಂಗಳ-ಬಿದಿಗೆ-ಹಸ್ತ
ಸೆ. 24 ಬುಧ-ತದಿಗೆ-ಚಿತ್ತ
ಸೆ. 25 ಗುರು-ತದಿಗೆ-ಸ್ವಾತಿ
ಸೆ. 26 ಶುಕ್ರ-ಚತುರ್ಥಿ-ವಿಶಾಖ
**ಸೆ. 27 ಶನಿ-ಪಂಚಮಿ-ಅನುರಾಧ, ವಸಂತ ಪಂಚಮಿ**
ಸೆ. 28 ಭಾನು-ಷಷ್ಠಿ-ಜ್ಯೇಷ್ಠಾ
**ಸೆ. 29 ಸೋಮ-ಸಪ್ತಮಿ-ಮೂಲ, ಸರಸ್ವತಿ ಪೂಜೆ,**
**ಸೆ. 30 ಮಂಗಳ-ಅಷ್ಟಮಿ-ಮೂಲ, ಜೀವದಯಾಷ್ಟಮಿ**
**ಅ. 01 ಬುಧ-ನವಮಿ-ಪೂ.ಷಾಢ, ಮಹಾನವಮಿ-ಆಯುಧಪೂಜೆ**
**ಅ. 02 ಗುರು-ದಶಮಿ-ಉ.ಷಾಢ, ವಿಜಯದಶಮಿ ವಿಶೇಷ ಪೂಜೆ,**
ಅ. 03 ಶುಕ್ರ-ಏಕಾದಶಿ-ಶ್ರವಣ
ಅ. 04 ಶನಿ-ದ್ವಾದಶಿ-ಧನಿಷ್ಠಾ
ಅ. 05 ಭಾನು-ತ್ರಯೋದಶಿ-ಶತಭಿಷಾ
ಅ. 06 ಸೋಮ-ಚತುರ್ದಶಿ-ಪೂ.ಭಾದ್ರ-ಉ.ಭಾದ್ರ
ಅ. 07 ಮಂಗಳ-ಹುಣ್ಣಿಮೆ-ರೇವತಿ
ಅ. 08 ಬುಧ-ಪ್ರತಿಪದ-ಬಿದಿಗೆ
ಅ. 09 ಗುರು-ತದಿಗೆ-ಭರಣಿ
ಅ. 10 ಶುಕ್ರ-ಚತುರ್ಥಿ-ಕೃತ್ತಿಕಾ
ಅ. 11 ಶನಿ-ಪಂಚಮಿ-ರೋಹಿಣಿ
ಅ. 12 ಭಾನು-ಷಷ್ಠಿ-ಮೃಗಶಿರಾ
ಅ. 13 ಸೋಮ-ಸಪ್ತಮಿ-ಆರಿದ್ರಾ
ಅ. 14 ಮಂಗಳ-ಅಷ್ಟಮಿ-ಪುನರ್ವಸು
ಅ. 15 ಬುಧ-ನವಮಿ-ಪುಷ್ಯ
ಅ. 16 ಗುರು-ದಶಮಿ-ಆಶ್ಲೇಷಾ

WWW.HOMBUJAPADMAVATI.ORG

ಶ್ರೀಕ್ಷೇತ್ರ ಹೊಂಬುಜದಲ್ಲಿ ಕ್ಷಮಾವಳಿ ಉತ್ಸವ

## "ಅಹಿಂಸಾಭಾವದ ಮೈತ್ರಿಭಾವವು ಸರ್ವತ್ರ ಕ್ಷೇಮವನ್ನುಂಟು ಮಾಡುತ್ತದೆ"

ಪರಮಪೂಜ್ಯ ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಹೊಂಬುಜ (ಸೆ.07):** ಅತಿಶಯ ಶ್ರೀಕ್ಷೇತ್ರ ಹೊಂಬುಜದ ಭಗವಾನ ಶ್ರೀ 1008 ಪಾರ್ಶ್ವನಾಥ ಸ್ವಾಮಿ, ಮಹಾಮಾತೆ ಯಕ್ಷಿ ಶ್ರೀ ಪದ್ಮಾವತಿ ದೇವಿ ಸನ್ನಿಧಿಯಲ್ಲಿ ದಶಧರ್ಮಗಳ ಆಚರಣೆಯ ಮರ್ಮವನ್ನರಿಯುವ ಪರ್ಯೂಷಣ ಪರ್ವವು ಹನ್ನೊಂದನೇಯ ದಿನದಂದು ಸಂಪನ್ನಗೊಂಡಿತು. ಹೊಂಬುಜ ಜೈನಮಠದ ಪೀಠಾಧೀಶರಾದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳವರ ನೇತೃತ್ವ, ದಿವ್ಯ ಮಾರ್ಗದರ್ಶನ, ಸಾನಿಧ್ಯದಲ್ಲಿ ಭಕ್ತವೃಂದದವರು ಶ್ರದ್ಧಾ ಭಕ್ತಿಯಿಂದ ಆಗಮೋಕ್ತ ವಿಧಿ-ವಿಧಾನದಲ್ಲಿ ಸಾಂಗವಾಗಿ ಪೂಜಾದಿ ಧಾರ್ಮಿಕ ವಿಧಾನಗಳು ನೆರವೇರಿತು. ಪರಂಪರೆಯ ಅನಂತನೋಂಪಿಯನ್ನು ವ್ರತಾಧಾರಿ ಶ್ರಾವಕ-ಶ್ರಾವಿಕೆಯರು ಜಿನಸ್ತುತಿ ಸ್ತುತಿಸುತ್ತಾ ಪೂಜೆ ಸಮರ್ಪಿಸಿದರು.

**"ಉತ್ತಮ ದಶಧರ್ಮಗಳ ಅನೂಚಾನ ಪರಿಪಾಲನೆಯಿಂದ ಧರ್ಮ ಪ್ರಭಾವನೆ ಉಂಟಾಗುತ್ತದೆ. ಸಾತ್ವಿಕ ಮನೋಭಾವ ಸ್ಫುರಿಸುವ ಮನೋಧರ್ಮವನ್ನು ಇಂದ್ರಿಯ ನಿಗ್ರಹದಿಂದ ರೂಢಿಸಿಕೊಳ್ಳುವುದು ಕ್ಷೇಮವನ್ನುಂಟು ಮಾಡುತ್ತದೆ"** ಎಂದು ಸ್ವಸ್ತಿಶ್ರೀಗಳವರು **"ಅಹಿಂಸಾಭಾವ ಪರಿಸಲು, ಸತ್‌ಪರಿಣಾಮ ಬೀರಲು ಪರಸ್ಪರ ವೈರತ್ವ, ವೈಮನಸ್ಸನ್ನು ತ್ಯಜಿಸಿ, ಕಿರಿಯರು-ಹಿರಿಯರು ಜೈನ ಧರ್ಮದ ಮೂಲ ತತ್ವ-ಸಿದ್ಧಾಂತ-ಉಪದೇಶಗಳನ್ನು ಅರಿತುಕೊಂಡು ಬಾಳುವುದು ಜೀವನದಲ್ಲಿ ಯಶಃಕೀರ್ತಿ ಪ್ರಾಪ್ತಿಯಾಗುತ್ತದೆ''** ಎಂದು ಸರ್ವರನ್ನು ಹರಿಸಿದರು.

ಶ್ರೀ ಆದಿನಾಥ ಸ್ವಾಮಿ, ಶ್ರೀ ನೇಮಿನಾಥ ಸ್ವಾಮಿ, ಶ್ರೀ ಮಹಾವೀರ ಸ್ವಾಮಿ, ಶ್ರೀ ಸರಸ್ವತಿ ದೇವಿ, ಶ್ರೀಕ್ಷೇತ್ರಪಾಲ, ಶ್ರೀ ನಾಗಸನ್ನಿಧಿಯಲ್ಲಿ ವಿಶೇಷ ಪೂಜೆಗಳು ನೆರವೇರಿದವು. ಊರ ಪರವೂರ ಭಕ್ತರು, ಶ್ರೀ ಪದ್ಮಾವತಿ ಮಹಿಳಾ ಸಮಾಜ, ಶ್ರೀ ಕುಂದಕುಂದ ವಿದ್ಯಾಪೀಠದ ವಿದ್ಯಾರ್ಥಿಗಳು ಪರಸ್ಪರ **'ಕ್ಷಮೆ ಯಾಚಿಸಿ'** ಧನ್ಯರಾದರು. ಅಂದು ಪಲ್ಲಕ್ಕಿ ಉತ್ಸವ ನೆರವೇರಿತು.

## ಧರ್ಮ ಸಂರಕ್ಷಣಾ ಸಮಾವೇಶ । ನ್ಯಾಯಕ್ಕಾಗಿ ಸಾಮೂಹಿಕ ಪ್ರಾರ್ಥನೆ

# "ಧರ್ಮಸ್ಥಳದ ಕೀರ್ತಿಗೆ ಎಂದೂ ಚ್ಯುತಿ ಇಲ್ಲ"

–ಪರಮಪೂಜ್ಯ ಸ್ವಸ್ತಿಶ್ರೀ ಧವಳಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ



**ಧರ್ಮಸ್ಥಳ:** **'ಸತ್ಯ, ಅಹಿಂಸಾ ಪರಿಪಾಲಕರಾದ ಜೈನರು ಯಾರಿಗೂ ತೊಂದರೆ ಕೊಡುವುದಿಲ್ಲ. ಆದರೆ ತೊಂದರೆ ಕೊಟ್ಟವರನ್ನು ನಾವು ಬಿಡುವುದಿಲ್ಲ'** ಎಂದು ಅರಹಂತಗಿರಿ ಜೈನಮಠದ ಪ.ಪೂ. ಸ್ವಸ್ತಿಶ್ರೀ ಧವಳಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು ಆ. 29ರ ಶುಕ್ರವಾರ ಧರ್ಮಸ್ಥಳದಲ್ಲಿ ಸಕಲ ಜೈನ ಮಠಗಳ ಭಟ್ಟಾರಕರುಗಳ ನೇತೃತ್ವದಲ್ಲಿ ಆಯೋಜಿಸಿದ್ದ ಧರ್ಮ ಸಂರಕ್ಷಣಾ ಸಮಾವೇಶದಲ್ಲಿ ಮಾತನಾಡಿ, **'ಸತ್ಯಮೇವ ಜಯತೇ ಎನ್ನುವಂತೆ ಸದಾ ಜಯವಿದೆ. ಸತ್ಯಕ್ಕೆ ಎಂದೂ ಸಾವಿಲ್ಲ. ಸತ್ಯ, ಧರ್ಮ, ನ್ಯಾಯ, ನೀತಿ ನೆಲೆನಿಂತ ಸರ್ವಧರ್ಮ ಸಮನ್ವಯ ಕೇಂದ್ರ ಧರ್ಮಸ್ಥಳದ ಶೋಭೆ ಮತ್ತು ಕೀರ್ತಿಗೆ ಎಂದೂ ಚ್ಯುತಿಬಾರದು'** ಎಂದರು

**'ಹೆಗ್ಗಡೆಯವರು ಸರ್ವ ಧರ್ಮೀಯರ ಮನೆಗಳನ್ನು ಹಾಗೂ ಮನಗಳನ್ನು ಬೆಳಗುವ ನಂದಾದೀಪ. ಅದನ್ನು ನಂದಿಸಲು ಹೋದರೆ ಧರೆಯೇ ಹೊತ್ತಿ ಉರಿಯಬಹುದೆಂದು'** ಕನಕಗಿರಿ ಜೈನಮಠದ ಪ.ಪೂ. ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ ತಿಳಿಸಿದರು.

**'ಧರ್ಮ, ಸಂಸ್ಕೃತಿ ಮತ್ತು ಸಂಸ್ಕಾರ ಸಂರಕ್ಷಣೆಗಾಗಿ ಧರ್ಮಸ್ಥಳದ ವತಿಯಿಂದ ಮಾಡುತ್ತಿರುವ ಸೇವಾ ಕಾರ್ಯ ವಿಶ್ವಮಾನ್ಯ. ಹಳ್ಳಿಯಿಂದ ದಿಲ್ಲಿಯವರೆಗಿನ ಗ್ರಾಮಾಭಿವೃದ್ಧಿ ಯೋಜನೆ, ಸ್ವ–ಉದ್ಯೋಗ ತರಬೇತಿ ಸಂಸ್ಥೆ, ಆರೋಗ್ಯ, ಶಿಕ್ಷಣ ಮತ್ತು ಇತರೆ ಬಹುಮುಖ ಸೇವಾ ಕಾರ್ಯಗಳು ಸಾರ್ವಕಾಲಿಕ ಮೌಲ್ಯ ಹೊಂದಿವೆ'** ಎಂದು ಹೊಂಬುಜದ ಪ.ಪೂ. ಜಗದ್ಗುರು ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ ಮಾತನಾಡಿದರು.

**'ಸತ್ಯವು ಸದಾ ಪರಿಶುದ್ಧವಾಗಿರುತ್ತದೆ. ಜೈನರು ಹಾಗೂ ಜೈನ ಧರ್ಮದ ಬಗ್ಗೆ ಎಂದೂ ಅವಹೇಳನ ಸಲ್ಲದು. ಇದನ್ನು ನಾವು ಎಂದಿಗೂ ಸಹಿಸೆವು'** ಎಂದು ಸೋಂದಾ ಜೈನಮಠದ ಪ.ಪೂ. ಸ್ವಸ್ತಿಶ್ರೀ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿ ತಿಳಿಸಿದರು.

ಕಾರ್ಕಳದ ಪ.ಪೂ. ಸ್ವಸ್ತಿಶ್ರೀ ಲಲಿತಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ, ಕಂಬದಹಳ್ಳಿಯ ಪ.ಪೂ.ಸ್ವಸ್ತಿಶ್ರೀ ಭಾನುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ, ಶ್ರವಣಬೆಳಗೊಳದ ಪ.ಪೂ. ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ, ಬಸ್ತಿಮಠದ ಪ.ಪೂ. ಸ್ವಸ್ತಿಶ್ರೀ ಲಕ್ಷ್ಮೀಸೇನ ಭಟ್ಟಾರಕ ಮಹಾಸ್ವಾಮೀಜಿ, ಆರತೀಪುರ ಜೈನಮಠದ ಪ.ಪೂ. ಸ್ವಸ್ತಿಶ್ರೀ ಸಿದ್ಧಾಂತಕೀರ್ತಿ ಭಟ್ಟಾರಕ ಮಹಾಸ್ವಾಮೀಜಿ, ಲಕ್ಕವಳ್ಳಿಯ ಪ.ಪೂ. ಸ್ವಸ್ತಿಶ್ರೀ ವೃಷಭಸೇನ ಭಟ್ಟಾರಕ ಮಹಾಸ್ವಾಮೀಜಿ, ರಾಜಸ್ಥಾನದ ತಿಜಾರಮಠದ ಸೌರಭಸೇನ ಭಟ್ಟಾರಕ ಮಹಾಸ್ವಾಮೀಜಿ ಹಾಗೂ ವರೂರು ಜೈನ ಮಠದ ಪ.ಪೂ. ಸ್ವಸ್ತಿಶ್ರೀ ಧರ್ಮಸೇನ ಭಟ್ಟಾರಕ ಸ್ವಾಮೀಜಿ ಶುಭ ಹಾರೈಸಿ ಧರ್ಮಸ್ಥಳ ಹಾಗೂ ಹೆಗ್ಗಡೆಯವರ ಜೊತೆ ಸದಾ ನಾವೆಲ್ಲರೂ ಸೇವೆಗೆ ಬದ್ಧರಾಗಿದ್ದೇವೆ ಎಂದು ಭರವಸೆ ನೀಡಿದರು.

WWW.HOMBUJAPADMAVATI.ORG

## 'ಭಟ್ಟಾರಕರಿಂದ ಹೆಚ್ಚಿನ ಉತ್ಸಾಹ, ಪ್ರೇರಣೆ ಲಭಿಸಿದೆ'

–ಧರ್ಮಾಧಿಕಾರಿ ಡಾ। ಡಿ. ವೀರೇಂದ್ರ ಹೆಗ್ಗಡೆಯವರು



**'ಭಾದ್ರಪದ ಮಾಸದಲ್ಲಿ ದಶಲಕ್ಷಣ ಪರ್ವ ಆಚರಣೆಯಂತಹ ಪವಿತ್ರ ಪರ್ವದ ಸಂದರ್ಭದಲ್ಲಿ ಎಲ್ಲ ಭಟ್ಟಾರಕರು ತಮಗೆ ಹಾಗೂ ಧರ್ಮಸ್ಥಳಕ್ಕೆ ಬೆಂಬಲ ನೀಡಿ, ನಿಮ್ಮ ಜತೆ ಸದಾ ಇದ್ದೇವೆ ಎಂದು ಭರವಸೆ ನೀಡಿರುವುದು ನಮಗೆ ಹೆಚ್ಚಿನ ಉತ್ಸಾಹ ಮತ್ತು ಪ್ರೇರಣೆ ನೀಡಿದೆ'** ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಧರ್ಮಸ್ಥಳದಲ್ಲಿ ಆಯೋಜಿಸಿದ್ದ ಧರ್ಮ ಸಂರಕ್ಷಣಾ ಸಮಾವೇಶದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಇಂದಿನ ಈ ಶುಭಾವಸರದಲ್ಲಿ **ಎಲ್ಲ ಮಠಾಧೀಶರ ದರ್ಶನ ಭಾಗ್ಯ ಲಭಿಸಿರುವುದರಿಂದ ಅತೀವ ಸಂತಸವಾಗಿದೆ.** ಸತ್ಯ, ಅಹಿಂಸೆ, ತ್ಯಾಗ, ಬ್ರಹ್ಮಚರ್ಯ ಇತ್ಯಾದಿ ದಶಧರ್ಮಗಳನ್ನು ಜೈನರು ನಿತ್ಯವೂ ಪಾಲಿಸುತ್ತಾರೆ. ತತ್ತ್ವ ಸಿದ್ಧಾಂತ, ಧರ್ಮ ಇರುವುದು ಕೇವಲ ಓದಲು, ಉಪದೇಶಕ್ಕೆ ಮಾತ್ರ ಅಲ್ಲ. ಅದನ್ನು ನಾವು ನಿತ್ಯವೂ ಪಾಲಿಸಬೇಕು. ಸಮ್ಯಕ್‌ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷ ಮಾರ್ಗ ಎಂಬುದು ಜೈನ ಧರ್ಮದ ಸಾರ. ಅಂದರೆ ಸರಿಯಾದ ತತ್ತ್ವ ಸಿದ್ಧಾಂತಗಳ ಬಗ್ಗೆ ನಂಬಿಕೆ, ತಿಳುವಳಿಕೆ (ಜ್ಞಾನ) ಮತ್ತು ಆಚರಣೆಯಿಂದ ಮೋಕ್ಷಪ್ರಾಪ್ತಿಯಾಗುತ್ತದೆ ಎಂದು ಅರ್ಥ. ಇದರ ಪ್ರತೀಕವಾಗಿ ಮೂರು ಎಳೆಗಳಿರುವ ಜನಿವಾರವನ್ನು ಜೈನರು ಧರಿಸುತ್ತಾರೆ. ಇಂತಹ ಸಾತ್ವಿಕ ಹಾಗೂ ನೈತಿಕ ಜೀವನದಿಂದ ಸುಖ–ಶಾಂತಿ, ನೆಮ್ಮದಿ ಸಿಗುತ್ತದೆ ಎಂದು ಅವರು ಎಲ್ಲಾ ಭಟ್ಟಾರಕರಿಗೆ ಕೃತಜ್ಞತೆ ವ್ಯಕ್ತಪಡಿಸಿದರು.

ಶ್ರೀಮತಿ ಹೇಮಾವತಿ ವೀ. ಹೆಗ್ಗಡೆ, ಡಿ. ಸುರೇಂದ್ರ ಕುಮಾರ್, ಅನಿತಾ ಸುರೇಂದ್ರ ಕುಮಾರ್, ಡಿ. ಹರ್ಷೇಂದ್ರ ಕುಮಾರ್, ಸುಪ್ರೀಯಾ ಹರ್ಷೇಂದ್ರ ಕುಮಾರ್, ಶ್ರದ್ಧಾ ಅಮಿತ್ ಮತ್ತು ಸೋನಿಯಾವರ್ಮ ಉಪಸ್ಥಿತರಿದ್ದರು.

## ಆದಿನಾಥ ದಿಗಂಬರ ಜೈನ ಮಂದಿರದಲ್ಲಿ ಸಂಪನ್ನಗೊಂಡ ದಶಲಕ್ಷಣ ಪರ್ವ



**ಸಾಗರ (ಸೆ.07) :** ಜೈನ ಧರ್ಮದ ತತ್ವ ಸಿದ್ಧಾಂತಗಳನ್ನು ಅನುಸರಿಸಿದಲ್ಲಿ ಜಗತ್ತು ಶಾಂತಿಯಿಂದ ಇರಲು ಸಾಧ್ಯ ಎಂದು ಕಸಾಪ ಅಧ್ಯಕ್ಷ ವಿ.ಟಿ. ಸ್ವಾಮಿ ಹೇಳಿದರು. ಅವರು ಇಲ್ಲಿನ ನೆಹರು ಮೈದಾನದ ಶ್ರೀ ಆದಿನಾಥ ದಿಗಂಬರ ಜೈನಮಂದಿರದಲ್ಲಿ ಆಯೋಜಿಸಿದ್ದ 10 ದಿನಗಳ ಕಾಲ ದಶಧರ್ಮ ಕಾರ್ಯಕ್ರಮದ ಆರಂಭದಲ್ಲಿ ಉಪನ್ಯಾಸವನ್ನು ನೀಡಿದರು.

ಹತ್ತು ದಿನಗಳ ಕಾಲ ನಡೆದ ಪೂಜಾ ಕಾರ್ಯವನ್ನು ಪುರೋಹಿತರಾದ ಅಶೋಕ ಇಂದ್ರ, ಅಕ್ಷರ ಇಂದ್ರ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಪದ್ಮಶ್ರೀ ಮಹಿಳಾ ಸಮಾಜದ ಸದಸ್ಯರು ಹಾಗೂ ಪ್ರಮುಖರಾದ ಹೊಯ್ಸಳ ಜೈನ್, ನಾಗರಾಜ್ ಜೈನ್, ರಾಜಕುಮಾರ್ ಜೈನ್, ಅಶೋಕ್ ಕುಮಾರ್ ಜೈನ್, ಸುನೀಲ್ ಜೈನ್, ಮಹಾವೀರ ಜೈನ್, ಗಜೇಂದ್ರ ಜೈನ್, ರತಿ, ಚಂದ್ರಕಲಾ, ಶೃತಿ, ಜ್ಯೋತಿ ಇನ್ನಿತರರು ಭಾಗವಹಿಸಿದ್ದರು.

## 11ನೇ ವರ್ಷದ ಅನಂತನೋಂಪಿ ಪೂಜಾ ಕಾರ್ಯಕ್ರಮ



**ದಾವಣಗೆರೆ :** ಇಲ್ಲಿಯ ಎಂಸಿಸಿ 'ಬಿ' ಬ್ಲಾಕ್‌ನಲ್ಲಿರುವ ಭಗವಾನ ಶ್ರೀ 1008 ಕಲ್ಪದ್ರುಮ ಆದಿನಾಥ ಜಿನಮಂದಿರದಲ್ಲಿ ದಶಲಕ್ಷಣ ಮಹಾಪರ್ವ ಹಾಗೂ 11ನೇ ವರ್ಷದ ಭಗವಾನ ಶ್ರೀ 1008 ಶ್ರೀ ಅನಂತನಾಥಸ್ವಾಮಿ ನೋಂಪಿ ಪೂಜಾ ಮಹೋತ್ಸವವು ಸೋಂದಾ ಜೈನಮಠದ ಪರಮಪೂಜ್ಯ ಸ್ವಸ್ತಿಶ್ರೀ ಅಕಲಂಕಕೇಸರಿ ಭಟ್ಟಾಕಲಂಕ ಭಟ್ಟಾರಕ ಮಹಾಸ್ವಾಮೀಜಿಯವರು ಕಾರ್ಯಕ್ರಮದ ಸಾನಿಧ್ಯ ಹಾಗೂ ನೇತೃತ್ವದಲ್ಲಿ ಅದ್ದೂರಿಯಾಗಿ ನೆರವೇರಿತು. ಇದೇ ಸಂದರ್ಭದಲ್ಲಿ ಜಿನಮಂದಿರಕ್ಕೆ ಹೊಸದಾಗಿ ರಜತ ಬ್ರಹ್ಮಯಕ್ಷ ಮೂರ್ತಿಯನ್ನು ಮಾಡಿಸುವ ಬಗ್ಗೆ ಬೆಳ್ಳಿ ಮತ್ತು ಧನರಾಶಿ ಇವುಗಳನ್ನು ಶ್ರಾವಕರು ದಾನ ರೂಪದಲ್ಲಿ ನೀಡಿದರು. ಸೋಂದಾ ಜೈನ ಮಠದಲ್ಲಿ ಹೊಸದಾಗಿ ನಿರ್ಮಾಣ ಹಂತದಲ್ಲಿರುವ ತ್ರಿಕೂಟ ಶ್ರೀ ಆದಿನಾಥ ಜಿನಮಂದಿರಕ್ಕೆ ಶ್ರಾವಕರು ಸುಮಾರು 8 ಲಕ್ಷ ರೂ ಗಳನ್ನು ದೇಣಿಗೆ ನೀಡಿದರು. ಹಾಗೂ ಪ್ರತಿವರ್ಷದಂತೆ ಈ ವರ್ಷವೂ ಸೋಂದಾ ಮಠದಲ್ಲಿರುವ ವಿದ್ಯಾರ್ಥಿಗಳಿಗೆ ಧನಸಹಾಯ ಮತ್ತು ವಿದ್ಯಾಭ್ಯಾಸಕ್ಕೆ ಅವಶ್ಯವಿರುವ ಸಾಮಾಗ್ರಿಗಳನ್ನು ದಾನ ರೂಪದಲ್ಲಿ ದೇಣಿಗೆ ನೀಡಿದರು.

62 ವ್ರತಾರ್ಥಿಗಳು ಸಂಕಲ್ಪ ಪೂಜೆಯಲ್ಲಿ ಪಾಲ್ಗೊಂಡಿದ್ದರು. ಸ್ಥಾನಿಕ ಪಂಡಿತರಾದ ಮಂಜುನಾಥ ಬಸ್ತಿ ಮತ್ತು ಶಿರಸಿಯ ನಾಗರಾಜ ಪಂಡಿತ್ ಇವರು ಪೂಜಾ ವಿಧಿಗಳನ್ನು ನೆರವೇರಿಸಿಕೊಟ್ಟರು. ಕೊನೆಯ ದಿನದಂದು ಕ್ಷಮಾವಳಿ ಕಾರ್ಯಕ್ರಮ ನಡೆಯಿತು.

## "ಸಾಮೂಹಿಕ ಕ್ಷಮಾವಳಿ ಕಾರ್ಯಕ್ರಮ"



**ಬೆಂಗಳೂರು :** ಸೆ. 7 ಭಾನುವಾರ ಕರ್ನಾಟಕ ಜೈನ ಭವನದಲ್ಲಿ ಸಾಮೂಹಿಕ ಕ್ಷಮಾವಳಿ ಕಾರ್ಯಕ್ರಮದಲ್ಲಿ ಆರತಿಪುರ ಜೈನಮಠದ ಪ.ಪೂ ಸ್ವಸ್ತಿಶ್ರೀ ಸಿದ್ಧಾಂತಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಯವರ ಪಾವನ ಸಾನಿಧ್ಯ ವಹಿಸಿ **"ನಾವು ಎಷ್ಟೇ ಕಷ್ಟ ಬಂದರೂ ಯಾರು ಏನೇ ತೊಂದರೆ ಮಾಡಿದರೂ ನಾವು ಕ್ಷಮಾ ಗುಣವನ್ನು ಧಾರಣೆ ಮಾಡಬೇಕು"** ಎಂದು ಆಶೀರ್ವಚನ ಮಾಡಿದರು. ತ್ಯಾಗಿ ಸೇವಾ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಧರ್ಮಸ್ಥಳ ಸುರೇಂದ್ರ ಕುಮಾರ್ ಸಮಾರಂಭದ ಉದ್ಘಾಟನೆಯನ್ನು ನೆರವೇರಿಸಿದರು.



ಶ್ರೀಕ್ಷೇತ್ರ ಹೊಂಬುಜದಲ್ಲಿ ದಶಲಕ್ಷಣ ಮಹಾಪರ್ವದ ಪ್ರತಿದಿನ ಸಂಜೆ ಕುಂದಕುಂದ ವಿದ್ಯಾಪೀಠದ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

## ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಬೆಂಗಳೂರು :** ಪಂಡಿತರತ್ನ ಎ. ಶಾಂತರಾಜಶಾಸ್ತ್ರಿ ಟ್ರಸ್ಟ್ ವತಿಯಿಂದ 2025ನೇ ಸಾಲಿನ ಈ ಕೆಳಗೆ ಕಾಣಿಸಿರುವ ವಿಷಯಗಳಲ್ಲಿ ಅಭ್ಯಾಸಿಸುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ಅರ್ಜಿ ಆಹ್ವಾನಿಸಲಾಗಿದೆ. **ಜೈನಾಲಜಿ/ಪ್ರಾಕೃತ, ಜೈನಾಗಮ ಅಭ್ಯಾಸ ಮಾಡುವ; ಮಹಾಪುರಾಣದಲ್ಲಿ ಅಂತರ್ಗತ ವಿಭಿನ್ನ ವಿಷಯಗಳ ಬಗ್ಗೆ ಸಂಶೋಧಿಸುವ; ಕನ್ನಡ, ಸಂಸ್ಕೃತ, ಪ್ರಾಕೃತ ವಿಷಯವಾಗಿ ಎಂ.ಎ. ಅಭ್ಯಾಸಿಸುತ್ತಿರುವ; ಸಂಗೀತ, ಭಜನೆ, ಜಿನಭಕ್ತಿ ಗೀತಗಾಯನದಲ್ಲಿ ಅಭ್ಯಾಸಿಸುತ್ತಿರುವ ವಿದ್ಯಾರ್ಥಿಗಳು.**

ಈ ವಿಷಯಗಳಲ್ಲಿ ವಿದ್ಯಾರ್ಥಿ ವೇತನಕ್ಕಾಗಿ ವಿದ್ಯಾರ್ಥಿಗಳು ತಾವು ಓದುತ್ತಿರುವ ತರಗತಿ ನಮೂದಿಸಿ, 5 ರೂ. ಸ್ಟಾಂಪ್ ಹಚ್ಚಿದ 'ಸ್ವ' ವಿಳಾಸ ಬರೆದ ಲಕೋಟೆ ಕಳುಹಿಸಿ, ಅರ್ಜಿ ಫಾರಂ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಟ್ರಸ್ಟ್‌ನ ವಿಳಾಸಕ್ಕೆ ದಿನಾಂಕ 20–10–2025ರೊಳಗೆ ಸಾಧಾರಣ ಅಂಚೆ ಮೂಲಕ ಕಳುಹಿಸಿಕೊಡಬೇಕೆಂದು ಟ್ರಸ್ಟ್‌ನ ಚೇರ್ಮನ್ ಎಸ್. ಜಿತೇಂದ್ರ ಕುಮಾರ್‌ರವರು ತಿಳಿಸಿದ್ದಾರೆ.

॥ ಭಗವಾನ್ ಶ್ರೀ ಪಾರ್ಶ್ವನಾಥಾಯ ನಮಃ ॥



॥ ಶ್ರೀ ಪದ್ಮಾಂಬಾಯೈ ನಮಃ ॥



ಶ್ರೀ ಹೊಂಬುಜ ಅತಿಶಯ ಮಹಾಕ್ಷೇತ್ರದಲ್ಲಿ ಭಕ್ತಾದಿಗಳು ಸಲ್ಲಿಸುವ

# ಹರಕೆ, ಪೂಜೆ ಮತ್ತು ಕಾಣಿಕೆ ಪಟ್ಟಿಯ ವಿವರ

| | | | | | |
|---|---|---|---|---|---|
| 1 | ಶ್ರೀ ಪಾರ್ಶ್ವನಾಥಸ್ವಾಮಿಗೆ ಪಂಚಾಮೃತ ಅಭಿಷೇಕ | 150/- | 23 | ಕುಂಕುಮ ಅರ್ಚನೆ | 150/- |
| 2 | ಶ್ರೀ ನೇಮೀಶ್ವರ ಸ್ವಾಮಿಗೆ ಪಂಚಾಮೃತ ಅಭಿಷೇಕ | 150/- | 24 | ಜಟ್ಟಿಂಗರಾಯನ ಪಂಚಕಜ್ಜಾಯ ಪೂಜೆ | 200/- |
| 3 | ಶ್ರೀ ಪದ್ಮಾವತೀ ಅಮ್ಮನವರಿಗೆ ಪಂಚಾಮೃತ ಅಭಿಷೇಕ | 150/- | 25 | ಜಟ್ಟಿಂಗರಾಯನ ವಿಶೇಷ ಅಲಂಕಾರ | 500/- |
| 4 | ಶ್ರೀ ಸರಸ್ವತೀ ದೇವಿ ಅಮ್ಮನವರಿಗೆ ವಿಶೇಷ ಪೂಜೆ | 200/- | 26 | ಹೆಜ್ಜೆ ನಮಸ್ಕಾರ | 100/- |
| 5 | ಕ್ಷೀರಾಭಿಷೇಕ | 100/- | 27 | ನಾಮಕರಣ | 3000/- |
| 6 | ಮಹಾನೈವೇದ್ಯ ಪೂಜೆ | 500/- | 28 | ಕರ್ಣವೇದನ | 100/- |
| 7 | ವರಹ ಪೂಜೆ | 200/- | 29 | ತ್ಯಾಗಿಗಳಿಗೆ ಆಹಾರ ನಿಧಿ | 1000/- |
| 8 | ಪಂಚಕಜ್ಜಾಯ ಪೂಜೆ | 200/- | 30 | ಅಕ್ಷರಾಭ್ಯಾಸ ಪ್ರಾರಂಭ | 500/- |
| 9 | ಪ್ರತ್ಯೇಕ ಪ್ರಸಾದ ಕಾಣಿಕೆ | 200/- | 31 | ಹಣ್ಣು ಕಾಯಿ ಪೂಜೆ | 100/- |
| 10 | ಉಡಿ ಪೂಜೆ | 200/- | 32 | ಲಗ್ನ ಕಾಣಿಕೆ | 5000/- |
| 11 | ಸೀರೆ & ಉಡಿ ಪೂಜೆ | | 33 | ಅನ್ನ ಪ್ರಾಶನ | 250/- |
| 12 | ಶ್ರೀ ಸ್ವಾಮಿ ಸಹಸ್ರನಾಮ ಪೂಜೆ | 1000/- | 34 | ಹಣ್ಣು ಕಾಯಿ | 10/- |
| 13 | ಶ್ರೀ ಪದ್ಮಾವತೀ ಸಹಸ್ರನಾಮ ಪೂಜೆ | 1000/- | 35 | ವಾಹನ ಪೂಜೆ | 200/- |
| 14 | ನವ ಕಲಶಾಭಿಷೇಕ | 500/- | 36 | ಸಿಹಿ ತಿಂಡಿ ಪ್ರಸಾದ | 3000/- |
| 15 | 24 ಕಲಶಾಭಿಷೇಕ | 1000/- | 37 | ನಂದಾದೀಪ (1 ತಿಂಗಳಿಗೆ) | 1100/- |
| 16 | 54 ಕಲಶಾಭಿಷೇಕ | 1500/- | 38 | ಶ್ರೀ ಬೃಹತ್ ಕಲಿಕುಂಡ ಯಂತ್ರಾರಾಧನೆ | 8000/- |
| 17 | 108 ಕಲಶಾಭಿಷೇಕ | 3000/- | 39 | ಶ್ರೀ ಬೃಹತ್ ಪದ್ಮಾವತೀದೇವಿ ಆರಾಧನೆ | 9000/- |
| 18 | ಉಪನಯನ ಸಂಸ್ಕಾರ (ವ್ರತ ಸ್ವೀಕಾರ) | 2000/- | 40 | ಬೃಹತ್ ನವಗ್ರಹ ಶಾಂತಿ | 10000/- |
| 19 | ಚೌಲ ಕರ್ಮ | 2000/- | 41 | ಅಮ್ಮನವರ ವಿಶೇಷ ಬೆಳ್ಳಿ ಅಲಂಕಾರ | 1500/- |
| 20 | ತುಲಾಭಾರ ಸೇವೆ | 1100/- | 42 | ಅಮ್ಮನವರ ವಿಶೇಷ ಸ್ವರ್ಣಾಲಂಕಾರ | 5000/- |
| 21 | ಲಕ್ಷ ಹೂವಿನ ಪೂಜೆಗೆ ಕಾಣಿಕೆ | 1100/- | 43 | ಕಾಳಸರ್ಪ ದೋಷ ಶಾಂತಿ | 3500/- |
| 22 | ಲಕ್ಷ ದೀಪೋತ್ಸವಕ್ಕೆ ಕಾಣಿಕೆ | 1100/- | 44 | ಲಘು ಶಾಂತಿ ಹೋಮ | 3000/- |

ವಿಜ್ಞಾಪನೆಗಳು : 1) ಶ್ರೀ ಕ್ಷೇತ್ರದಲ್ಲಿರುವ ವಿದ್ಯಾರ್ಥಿಗಳಿಗೆ ಮತ್ತು ಬರುವ ಯಾತ್ರಿಕರಿಗೆ ಧರ್ಮಾರ್ಥ ಊಟ ಮತ್ತು ಉಪಾಹಾರದ ವ್ಯವಸ್ಥೆಗಳಿವೆ. ಈ ಬೃಹತ್ ಧರ್ಮಕಾರ್ಯಕ್ಕೆ ಎಲ್ಲಾ ಧರ್ಮಾನುರಾಗಿಗಳು ಉದಾರ ಕೊಡುಗೆಯನ್ನು ನೀಡಿ ಪುಣ್ಯ ಭಾಗಿಗಳಾಗಬೇಕಾಗಿ ಆಪೇಕ್ಷಿಸುತ್ತೇವೆ. 2) ಪೂಜಾ ಧ್ರುವನಿಧಿ ಮೊಬಲಗು ರೂ. 3000-00.

ಸೂಚನೆಗಳು : 1) ಶ್ರೀ ಕ್ಷೇತ್ರದಲ್ಲಿರುವ ಜಿನಾಲಯಗಳ ಗರ್ಭಗುಡಿ ಪ್ರವೇಶಿಸಿ ಭಕ್ತಾದಿಗಳು ಸ್ವತಃ ಪೂಜೆ ಮತ್ತು ಸೇವೆಸಲ್ಲಿಸುವುದನ್ನು ನಿಷೇಧಿಸಲಾಗಿದೆ. 2) ಶ್ರೀ ಕ್ಷೇತ್ರದಲ್ಲಿರುವ ಬಸದಿಗಳಲ್ಲಿ ಭಕ್ತಾದಿಗಳು ಅಪೇಕ್ಷಿಸುವ ಯಾವುದೇ ರೀತಿಯ ಪೂಜೆ ಮತ್ತು ಸೇವೆಗಳನ್ನು ನೆರವೇರಿಸಿಕೊಡುವ ಅವಕಾಶವನ್ನು ಕಾದಿರಿಸಲಾಗಿದೆ. ಈ ವಿಚಾರದಲ್ಲಿ ಶ್ರೀಮಠದ ಪರಮಪೂಜ್ಯ ಮಹಾಸ್ವಾಮಿಗಳವರ ನಿರ್ಣಯವೇ ಅಂತಿಮವಾದುದು.

ದಿನಾಂಕ : 01-07-2024

ಆಡಳಿತಾಧಿಕಾರಿ
ಶ್ರೀ ಹೊಂಬುಜ ಜೈನಮಠ, ಶಿವಮೊಗ್ಗ ಜಿಲ್ಲೆ - 577 436

WWW.HOMBUJAPADMAVATI.ORG

॥ ಭಗವಾನ್ ಶ್ರೀ ಪಾರ್ಶ್ವನಾಥಾಯ ನಮಃ ॥



॥ ಜಗನ್ಮಾತೆ ಶ್ರೀ ಪದ್ಮಾವತಿ ದೇವಿ ನಮಃ ॥



ಶ್ರೀ ಹೊಂಬುಜ
ಅತಿಶಯ ಮಹಾಕ್ಷೇತ್ರದಲ್ಲಿ

# ಶ್ರೀ ಶರನ್ನವರಾತ್ರಿ ಮತ್ತು ವಿಜಯದಶಮಿ ಪೂಜಾ ಮಹೋತ್ಸವಗಳು

**22-09-2025ನೇ ಸೋಮವಾರದಿಂದ 02-10-2025ನೇ ಗುರುವಾರದವರೆಗೆ**

ಭಗವಾನ್ ಶ್ರೀ ಪಾರ್ಶ್ವನಾಥಸ್ವಾಮಿ ಮತ್ತು ಜಗನ್ಮಾತೆ ಶ್ರೀಪದ್ಮಾವತಿ ಅಮ್ಮನವರ ಮಹಾಸನ್ನಿಧಿಯಲ್ಲಿ



ಪರಮಪೂಜ್ಯ ಜಗದ್ಗುರು
ಸ್ವಸ್ತಿಶ್ರೀ ಡಾ. ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ
ದಿವ್ಯಸಾನಿಧ್ಯ, ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ
ಪರಂಪರೆಯಂತೆ ವೈಭವದಿಂದ ನೆರವೇರಲಿದೆ.

## ಕಾರ್ಯಕ್ರಮಗಳು

| | |
|---|---|
| 22-09-2025, ಸೋಮವಾರ | ಘಟ ಸ್ಥಾಪನೆ |
| 29-09-2025, ಸೋಮವಾರ | ಸರಸ್ವತಿ ಪೂಜೆ. |
| 30-09-2025, ಮಂಗಳವಾರ | ಜೀವದಯಾಷ್ಟಮಿ. |
| 01-10-2025, ಬುಧವಾರ | ಆಯುಧ ಪೂಜೆ ಮತ್ತು ಮಹಾನವಮಿ. |
| 02-10-2025, ಗುರುವಾರ | ವಿಜಯದಶಮಿ ಉತ್ಸವ, ಶ್ರೀ ಮಹಾದೇವಿ ಪಲ್ಲಕ್ಕಿ ಉತ್ಸವ, ಹೊಂಬುಜದ ಪರಮಪೂಜ್ಯ ಜಗದ್ಗುರು ಸ್ವಸ್ತಿಶ್ರೀ ದೇವೇಂದ್ರಕೀರ್ತಿ ಭಟ್ಟಾರಕ ಮಹಾಸ್ವಾಮೀಜಿಗಳವರ ಪರಂಪರಾಗತ ಸಿಂಹಾಸನಾರೋಹಣ, ಶ್ರೀಗಳವರ ಪಾದಪೂಜೆ. |

ಅತಿಶಯ ಶ್ರೀಕ್ಷೇತ್ರ ವರಂಗ ಮತ್ತು ಶ್ರೀಕ್ಷೇತ್ರ ಹಟ್ಟಿಯಂಗಡಿ ಜಿನಮಂದಿರಗಳಲ್ಲಿ ಶರನ್ನವರಾತ್ರಿ ಧಾರ್ಮಿಕ ಉತ್ಸವಾದಿ ಪೂಜಾ ವಿಧಿಗಳು ನೆರವೇರುವವು. ಸರ್ವ ಭಕ್ತವೃಂದದವರು ಶರನ್ನವರಾತ್ರಿ ಪೂಜಾ ವಿಧಿಗಳಲ್ಲಿ ಪಾಲ್ಗೊಂಡು ಪುಣ್ಯಭಾಗಿಗಳಾಗುವಂತೆ ಅಪೇಕ್ಷಿಸಲಾಗಿದೆ.

## ಸರ್ವರಿಗೂ ಆದರದ ಸ್ವಾಗತ

ಸಂಪರ್ಕ :
ಸೇವೆ : 9481453653
ವಸತಿ : 9483801460

ಆಡಳಿತಾಧಿಕಾರಿ
ಶ್ರೀಹೊಂಬುಜ ಜೈನ ಮಠ.
ಅಂಚೆ: ಹುಂಚ-577436, ಶಿವಮೊಗ್ಗ ಜಿಲ್ಲೆ

KARNATAKA BANK
sri hombuja jain math
VPA: hombujajainmath@kbl
SCAN QR CODE TO PAY
BHIM UPI
G Pay paytm amazon pay

ವಿ.ಸೂ. : ಭಕ್ತಾದಿಗಳು ತಮ್ಮ ಕಾಣಿಕೆಯನ್ನು ಎಂ.ಓ/ಬ್ಯಾಂಕ್ ಡ್ರಾಫ್ಟ್/ಚೆಕ್ ಮೂಲಕ ಕಳುಹಿಸಿಕೊಡಬಹುದು

NEFT/RTGS ಮೂಲಕ ಕಾಣಿಕೆ ಸಂದಾಯಕ್ಕಾಗಿ :
Sri Hombuja Jain Math
S.B. A/c No : 3182500101025001
with Karnataka Bank, Humcha Br.
IFSC Code : KARB0000318

Face book page
www.facebook.com/hombujapadmavathi
E-mail: shrihombuja@gmail.com
website : www.hombujapadmavathi.org

ಗುರುದೇವ GURUDEVA MONTHLY

RNI No. 13248/57-POSTEL REGD No. KA/SK/SMG 198/2024-26
Date of Posting 17th of every month. Sub Post office, Humcha - 577436
Licensed to post without prepayment Licence No: SK/WPP/226/2024-26

ವಾರ್ಷಿಕ ಚಂದಾ : ರೂಪಾಯಿ 150-00 ಮತ್ತು ಆಜೀವ ಸದಸ್ಯತ್ವಕ್ಕೆ : ರೂಪಾಯಿ 1000-00 ಮಾತ್ರ.

ವ್ಯವಸ್ಥಾಪಕರು, "ಗುರುದೇವ" ಕಾರ್ಯಾಲಯ, ಅಂಚೆ : ಹೊಂಬುಜ, ಶಿವಮೊಗ್ಗ-ಜಿಲ್ಲೆ, ಕರ್ನಾಟಕ-೫೭೭೪೩೬

Edited, Published & Printed by Sri C.D. Ashok Kumar, on behalf of Swasthishree Devendrakeerthi Bhattaraka Pattacharyavarya Swamiji, Sri Hombuja Jain Math
Printed at Sri Mahaveer Printing Press, J.P.N. Road, Durgigudi, Shimoga (Ph: 08182- 222044) and Published at Gurudeva Karyalaya Sri Hombuja Jain Math
Post: Humcha, Tq. Hosanagar., Dist. Shimoga-577436 Ph : 08185-262722